ಮಲಗಿದ್ದ. ಅವನ ಅರ್ಧ ಶರೀರ ಹರಿದ ಚಾದರಿನಲ್ಲಿದ್ದರೆ, ಉಳಿದರ್ಧ ಫರಸಿಯ ಮೇಲಿತ್ತು.

ನಾನು ಒಳಗೆ ಹೋಗಿ, "ಸುಷ್ಮಾ, ಹೊರಗೇನಿದೆ? ಸಾಥಿಯಾ ಮಲಗಿದ್ದಾನೆ" ಎಂದೆ.

"ಹೊರಗಡೆ ವಿಪರೀತ ಚಳಿಯಿದೆ, ನಾನು ಸ್ವೆಟರ್ ತೊಟ್ಟು ಅದರ ಮೇಲೆ ಶಾಲು ಹೊದ್ದುಕೊಂಡಿದ್ದರೂ ನಾನು ಗಡಗಡ ನಡುಗುತ್ತಿದ್ದೆ. ಆ ಬಡವನ ಮೈಮೇಲೆ ಸರಿಯಾದ ಬಟ್ಟೆಗಳೂ ಇಲ್ಲ. ಅಲ್ಲದೆ ಹೊದ್ದುಕೊಳ್ಳಲು ಗಟ್ಟಿ ಚಾದರ್ ಕೂಡಾ ಇಲ್ಲ."

ಸುಷ್ಮಾ ಒಳಗಿನಿಂದ ಒಂದು ಹಳೆಯ ಚಾದರ ತಂದು ನನ್ನ ಕೈಯಲ್ಲಿಡುತ್ತ, "ಹಿಡಿಯಿರಿ, ಈ ಚಾದರವನ್ನು, ಸಾಥಿಯಾನ ಮೈಮೇಲೆ ಹೊದೆಸಿ ಬನ್ನಿ" ಎಂದಳು.

ಸುಷ್ಮಾಳ ಕಣ್ಣುಗಳು ಒದ್ದೆಯಾಗಿದ್ದವು. ಅವಳ ಹೃದಯದ ಕರುಣೆ ಅವಳ ಕಣ್ಣುಗಳ ಮೂಲಕ ಹೊರಗೆ ಹರಿಯುತ್ತಿತ್ತು.

ಮರುದಿನ ಮುಂಜಾನೆ ತೋಟದಲ್ಲಿಯ ನಳದ ನೀರಿನಿಂದ ಕೈಕಾಲು ಮುಖ ತೊಳೆದು ಚಾದರವನ್ನು ಮಡಿಚಿ ಹಿಡಿದುಕೊಂಡು ನಮ್ಮ ಮನೆಯೊಳಗೆ ಬಂದು, "ವೈನಿ, ಈ ಚಾದರ ನಿಮ್ಮದಲ್ಲವೆ? ನಿಮ್ಮದೇ ಎಂಬುದನ್ನು ನಾನು ಬಲ್ಲೆ" ಎಂದ ಸಾಥಿಯಾ.

"ಆ ಚಾದರನ್ನು ನಿನಗಾಗಿಯೇ ಕೊಟ್ಟಿದ್ದೇನೆ. ಈಗ ಚಳಿ ಬಹಳ. ಆದ್ದರಿಂದ ದಿನಾಲೂ ಇದನ್ನು ಹೊದ್ದುಕೊಂಡು ಮಲಗು. ಇರಲಿ, ಈಗ ಸ್ವಲ್ಪ ಕೂತಿರು. ಚಪಾತಿ ಪಲ್ಲೆ ಹಚ್ಚಿಕೊಡುತ್ತೇನೆ. ತಿಂದು ಹೋಗು" ಎಂದಳು ಸುಷ್ಮಾ.

ಸಾಥಿಯಾ ಕೆಳಗೆ ಫರಸಿಯ ಮೇಲೆ ಕುಳಿತ. ಸುಷ್ಮಾ ಒಂದು ತಟ್ಟೆಯಲ್ಲಿ ಎರಡು ಚಪಾತಿ, ಕಾಯಿಪಲ್ಲೆ ಹಚ್ಚಿ ಅವನ ಮುಂದಿಟ್ಟಳು.

ಸಾಥಿಯಾ ಒಂದು ಚಪಾತಿಗೆ ಕಾಯಿಪಲ್ಲೆ ಸವರಿಕೊಂಡು ಮುದ್ದೆ ಮಾಡಿ ಬಾಯಿಯಲ್ಲಿ ತುರುಕಿಕೊಂಡು ಬಾಯಾಡಿಸತೊಡಗಿದ. ಸ್ವಲ್ಪ ಸಮಯದ ನಂತರ ಎರಡನೆಯ ಚಪಾತಿಯನ್ನು ಅದೇ ರೀತಿ ಬಾಯಲ್ಲಿ ತುರುಕಿಕೊಂಡು ತಿಂದು ಮುಗಿಸಿದ.

"ಚಪಾತಿ ಮತ್ತೆ ಕೊಡಲೇ?" ಸುಷ್ಮಾ ಕೇಳಿದಳು.

ಸಾಥಿಯಾ ಚಪಾತಿಯನ್ನು ಇನ್ನೂ ಬಾಯಾಡಿಸುತ್ತಿದ್ದ. ಆದ್ದರಿಂದ ಕೇವಲ ಕತ್ತನ್ನು ಅಲ್ಲಾಡಿಸಿ ಬೇಡವೆಂದು ಸೂಚಿಸಿದ. ಆಮೇಲೆ, "ವೈನಿ, ಸ್ವಲ್ಪ ಚಹಾ ಇದ್ದರೆ ಬೇಕು" ಎಂದ.

ಎಂದಿನಂತೆ ಕಪ್ಪಿನಲ್ಲಿಯ ಚಹಾವನ್ನೆಲ್ಲ ಬಸಿಯಲ್ಲಿ ಸುರುವಿಕೊಂಡು ಒಂದೇ ಉಸುರಿನಲ್ಲಿ ಆತ ಗುಟುಕರಿಸಿದ.

ಸಾಥಿಯಾನ ತಿನ್ನುವ ಮತ್ತು ಕುಡಿಯುವ ಈ ಪದ್ಧತಿಯನ್ನು ಕಂಡೇ ನಂದಿನಿ ಇವನಿಗೆ ಬಕಾಸುರನೆಂದು ಕರೆದಿರಬಹುದೆಂದು ನನಗೆ ಅನ್ನಿಸಿತು.

ಸಾಥಿಯಾ ಹೊರಟು ನಿಂತಾಗ, "ಸಾಥಿಯಾ, ಇವರ ಎರಡು ಹಳೆಯ ಶರ್ಟ್ ಪ್ಯಾಂಟುಗಳಿವೆ. ಅವುಗಳನ್ನು ಟೇಲರನಿಗೆ ಕೊಟ್ಟು ನಿನ್ನ ಅಳತೆಗೆ ಸರಿಹೊಂದುವಂತೆ ಆಲ್ಟರ್ ಮಾಡಿಸಿಕೊ. ಇಲ್ಲೊಂದು ತಗಡಿನ ಟ್ರಂಕಿದೆ. ನಿನ್ನೆಲ್ಲ ಬಟ್ಟೆಬರೆ, ಚಾದರಗಳನ್ನು ಇದರಲ್ಲಿಟ್ಟುಕೋ. ಅದಕ್ಕೊಂದು ಬೀಗ ಹಾಕಿ ಅಲ್ಲಿ ಇಟ್ಟುಕೊ" ಎಂದಳು.

ಸಾಥಿಯಾ ಎಂದಿನಂತೆ ನಕ್ಕ. ಅವನ ಗಡ್ಡಮೀಸೆಗಳು ಅವನು ನಕ್ಕಾಗ ಹರಡಿ ನಿಂತವು.

"ವೈನಿ, ಕಳ್ಳರು ಕಳವು ಮಾಡುವಂಥದ್ದೇನಿದೆ ನನ್ನ ಬಳಿ? ಹಾಂ, ನೀವು ಕೊಟ್ಟ ವಸ್ತುಗಳನ್ನು ಖಂಡಿತವಾಗಿ ಸುರಕ್ಷಿತವಾಗಿಟ್ಟುಕೊಳ್ಳುತ್ತೇನೆ" ಎಂದು ಸಾಥಿಯಾ ಚಾದರ ಮತ್ತು ಬಟ್ಟೆಗಳನ್ನು ಟ್ರಂಕಿನಲ್ಲಿಟ್ಟು ಅದನ್ನೆತ್ತಿಕೊಂಡು ಹೊರಗಡೆ ಹೋದ.